**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಇಂಡಿ.**

**ಸಿಸಿ.ನಂ: 1025/2017**

**ಪಿ.ಡಬ್ಲ್ಯೂ- 4**
**ಸಿ.ಡಬ್ಲ್ಯೂ- 4**

| | | |
|---|---|---|
| ಸಾಕ್ಷಿಯ ಹೆಸರು | : | ಸಿದ್ದಲಿಂಗಪ್ಪ |
| ತಂದೆ/ಗಂಡನ ಹೆಸರು | : | ರೇವಗೊಂಡಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಲೋಣಿ ಬಿ.ಕೆ |

**ದಿನಾಂಕ: 29-12-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ:**

ಚಾಸಾ-1 ಪರಿಚಯ, ಅವರು ನನ್ನ ತಂಗಿ. ಚಾಸಾ-10 ಪರಿಚಯ ಇಲ್ಲ. ಆರೋಪಿ ಪರಿಚಯ.

ಚಾಸಾ-1 ರವರ ಮದುವೆ ಯಾರೊಂದಿಗೆ ಆಗಿರುತ್ತದೆ ಅಂತಾ ನನಗೆ ಮಾಹಿತಿ ಇಲ್ಲ. ಚಾಸಾ-1 ಮತ್ತು ಆರೋಪಿ ನಡುವೆ ಆದ ಜಗಳದ ಕುರಿತು ನನಗೆ ಮಾಹಿತಿ ಇಲ್ಲ. ಪೋಲೀಸರ ಮುಂದೆ ಘಟನೆ ಕುರಿತು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ:**

ದಿ: 19.02.2017 ರಂದು ಮುಂಜಾನೆ 8.30 ಗಂಟೆ ಸುಮಾರಿಗೆ ಚಾಸಾ-1 ನನಗೆ ಪೋನ್ ಕರೆ ಮಾಡಿ ತಾನು ನಮ್ಮ ಊರಿನ ಗೊಡವಾನ ಹತ್ತಿರ ನಿಂತಿರುವ ಆರೋಪಿಗೆ ನನ್ನ ಮತ್ತು ಆರೋಪಿಯ ನಡುವೆ ಇರುವ ಗಂಡ ಹೆಂಡತಿಯ ಜಗಳದ ಕುರಿತು ನ್ಯಾಯಾ ಪಂಚಾಯತಿ ಮಾಡಿ ಕಳುಹಿಸಿಕೊಡಿ, ಎಷ್ಟು ದಿನ ನಾನು ನಮ್ಮ ಅಕ್ಕನ ಮನೆಯಲ್ಲಿ ಹುಡುಗಿಗೆ ತೆಗೆದುಕೊಂಡು ಇರಲಿ ಅಂತಾ ಹೇಳಿದಾಗ ಆರೋಪಿತನು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ನಾನು ಎಲ್ಲಿ ನೀನ್ನ ನ್ಯಾಯಾ ಮಾಡಲಿ ಬೇಕಾದರೆ ನೀನೆ ನಿನ್ನ ಗಂಡನ ಮನೆಗೆ ಹೋಗು ನನಗೇನು ಹೇಳುತ್ತಿಯಾ ಅಂತಾ ಬೈದು, ಕೈ ಹಿಡಿದು ಜಗ್ಗಾಡಿ, ಅಲ್ಲೆ ಬಿದ್ದಿರುವ ಕಲ್ಲಿನಿಂದ ಬೆನ್ನಿನಲ್ಲಿ ಹೊಡೆದು ತನಗೆ ನೂಕಿಸಿ ಕೊಟ್ಟಿರುತ್ತಾನೆ,

ಅದರಿಂದ ತನ್ನ ಬಲಗೈ ರೆಟ್ಟೆಗೆ ತೆರಚಿದ ಗಾಯವಾಗಿರುತ್ತದೆ. ಆಗ ಅಲ್ಲೆ ಇರುವ ಜನರು ಸದರಿ ಜಗಳ ಬಿಡಿಸಿರುತ್ತಾರೆ. ಆರ ಆರೋಪಿತನು ನೀ ಇನ್ನೊಮ್ಮೆ ಕೇಳಕ್ಕೆ ಬಂದರೆ ನಿನಗೆ ಹೊಡೆದು ಜೀವದ ಬೇದರಿಕೆ ಹಾಕಿರುತ್ತಾನೆ ಅಂತಾ ಆ ಕುರಿತು ತಾನು ದೂರು ದಾಖಲಿಸಿದ ಕುರಿತು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಆ ಕುರಿತು ನಾನು ಪೊಲೀಸರ ಮುಂದೆ ಮೇಲೆ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. **ಸದರಿ ಹೇಳಿಕೆಯನ್ನು ನಿಪಿ–4 ಎಂದು ಗುರುತಿಸಲಾಯಿತು.** ಆರೋಪಿ ನಮ್ಮ ಊರಿನವನು ಎಂದರೆ ಸರಿ. ಆರೋಪಿ ನಮ್ಮ ಊರಿನವನು ಆಗಿದ್ದರಿಂದ ಮತ್ತು ಆರೋಪಿಯೊಂದಿಗೆ ಗಳೆತನ ಇರುವುದರಿಂದ ನಿಪಿ–4 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಯ್ನು ಶಿಕ್ಷೆಯಿಂದ ಪಾರು ಮಾಡಲು ಇಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೆ.ಕೆ. ಸರಿ ಇದೆ.**

**ಸಹಿ/–**

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.,**